ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿತ್ರದುರ್ಗ ನಗರದಲ್ಲಿ ಡಾ॥ ಬಾಬು ಜಗಜೀವನ ರಾಂ ಕುಶಲಕರ್ಮಿಗಳ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಏಕ ಕಡತ ದಿನಾಂಕ: 13.09.2017

ಪ್ರಸ್ತಾವನೆ:-

ಮೇಲೆ ಓದಲಾದ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರು ಚಿತ್ರದುರ್ಗ ನಗರದ ಮಧ್ಯ ಭಾಗದಲ್ಲಿ ಅಂದರೆ ಬೆಂಗಳೂರು- ದಾವಣಗೆರೆ ಮುಖ್ಯ ರಸ್ತೆಯಲ್ಲಿರುವ ಹಳೆ ಜಿಲ್ಲಾ ಪಂಚಾಯತ್ ಅವರಣದಲ್ಲಿ (ಪ್ರವಾಸಿ ಮಂದಿರ ಪಕ್ಕ) ನಿಗಮದ ಹೆಸರಿಗೆ 17 ಗುಂಟೆ ಜಾಗವನ್ನು 30 ವರ್ಷ ಲೀಸ್ ಅವಧಿಗೆ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರು ಮಂಜೂರು ಮಾಡಿದ್ದು, ರೂ. 1,71,110/- ಗಳ ಭೂ ಮೌಲ್ಯ ಮತ್ತು ಭೂ ಪರಿವರ್ತನ ಶುಲ್ಕವನ್ನು ಪಾವತಿಸಿ ನಿಗಮದ ಹೆಸರಿಗೆ ಖಾತೆ ಮಾಡಿಸಲಾಗಿದ್ದು, ಈ ಜಾಗ ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುತ್ತದೆ. ಸದರಿ ಜಾಗದ ಮುಂಭಾಗದಲ್ಲಿ ನಿಗಮದ ಮೇಲೆ ಅವಲಂಭಿತವಾಗಿರುವ ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಶ್ರೇಯೋಭಿವೃದ್ಧಿಗಾಗಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 10 ಲಕ್ಷ ಸಂಖ್ಯೆಯ ಪರಿಶಿಷ್ಟ ಜಾತಿ ಸಮುದಾಯದವರಿದ್ದು, ಇವರಲ್ಲಿ ಸಾವಿರಾರು ಜನ ಚರ್ಮೋದ್ಯೋಗದ ಮೇಲೆ ಅವಲಂಭಿತರಾಗಿರುತ್ತಾರೆ ಹಾಗೂ ಬಹುತೇಕ ಕುಶಲಕರ್ಮಿಗಳು ಅವರ ಜೀವನೋಪಾಯಕ್ಕಾಗಿ ರಸ್ತೆಬದಿ ಕುಳಿತು ದುರಸ್ತಿ ಹಾಗೂ ಉತ್ಪಾದನ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಪ್ರಸ್ತುತ ವಾತಾವರಣದಲ್ಲಿ ರಸ್ತೆ ಅಗಲೀಕರಣ ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ರಸ್ತೆಬದಿ ಕುಟೀರಗಳನ್ನು ಇಟ್ಟುಕೊಂಡು ಕಾರ್ಯ ನಿರ್ವಹಿಸಲು ಕುಶಲಕರ್ಮಿಗಳಿಗೆ ಅನುಮತಿ ಸಿಗದೇ ಇರುವುದರಿಂದ ಅವರ ಜೀವನೋಪಾಯಕ್ಕೆ ತೊಂದರೆಯಾಗಿರುತ್ತದೆ. ಮೊದಲೇ ಶೋಷಣೆಗೆ ಒಳಗಾದ ಸಮುದಾಯಕ್ಕೆ ಸೇರಿದ ಕುಶಲಕರ್ಮಿಗಳು ಮತ್ತಷ್ಟು ತೊಂದರೆಗೊಳಗಾಗಿದ್ದಾರೆ. ಆದುದರಿಂದ ಅವರುಗಳಿಗೆ ಗೌರವಯುತವಾದ ಜೀವನ ಸಾಗಿಸಲು ವ್ಯವಸ್ಥೆ ಕಲ್ಪಿಸುವುದು ನಿಗಮದ ಕರ್ತವ್ಯವಾಗಿರುವುದಾಗಿ ತಿಳಿಸಿರುತ್ತಾರೆ.

ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಚಿತ್ರದುರ್ಗ ನಗರದಲ್ಲಿ ಪ್ರಮುಖ ಸ್ಥಳದಲ್ಲಿ ಜಿಲ್ಲಾಧಿಕಾರಿಗಳಿಂದ ಜಾಗದ ಮಂಜೂರಾತಿ ಪಡೆದಿದ್ದು, ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳಿಗೆ ಮಳಿಗೆಗಳನ್ನು ಹಾಗೂ ನಿಗಮದ ಮಾರಾಟ ಮಳಿಗೆ ಮತ್ತು ಜಿಲ್ಲಾ ಕಛೇರಿ ಕಟ್ಟಡವನ್ನು ಒಳಗೊಂಡ **"ಡಾ॥ ಬಾಬು ಜಗಜೀವನ ರಾಂ ಕುಶಲಕರ್ಮಿಗಳ ವಾಣಿಜ್ಯ ಸಂಕೀರ್ಣ"** ನಿರ್ಮಿಸಲು ಉದ್ದೇಶಿಸಿದ್ದು, ನಿಗಮದ ಸಿವಿಲ್ ವರ್ಕ್ ಕನ್‌ಸಲ್‌ಟೆಂಟ್ ರವರಾದ ಮೆ॥ ವ್ಯಾಪ್‌ಕಾಸ್ ಸಂಸ್ಥೆ, ಬೆಂಗಳೂರು ರವರಿಂದ ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿ ಸಿದ್ಧಪಡಿಸಲಾಗಿದೆ. ಇದಕ್ಕೆ ಯೋಜನಾ ವೆಚ್ಚ ರೂ.7,80,00,000/- (ರೂ. ಏಳು ಕೋಟಿ ಎಂಭತ್ತು ಲಕ್ಷಗಳು ಮಾತ್ರ) ಆಗುತ್ತದೆಂದು ಅಂದಾಜಿಸಲಾಗಿದ್ದು, ಕ್ರಿಯಾ ಯೋಜನೆಯಲ್ಲಿ

------2

4749 12/12/17

ರೂ.4.50 ಕೋಟಿಗಳಷ್ಟು ಅನುದಾನ ಲಭ್ಯವಿದ್ದು ಜೊತೆಗೆ ಮೈಸೂರಿನ ಸಾತಗಳ್ಳಿಯಲ್ಲಿ ಲೆದರ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆಗೆ ಕಾಯ್ದಿರಿಸಿರುವ ರೂ.12.80 ಕೋಟಿ ಅನುದಾನವನ್ನು ಹಲವು ಆಡಚಣೆಗಳಿರುವುದರಿಂದ ಮತ್ತು ಉದ್ದೇಶಿತ ಕಾಮಗಾರಿಗಳ ಬದಲಾಗಿ ವಸತಿ ಕಾರ್ಯಾಗಾರಗಳು ಮತ್ತು ಉತ್ಪಾದನ ಕೇಂದ್ರ ಸ್ಥಾಪಿಸಲು ಕುಶಲಕರ್ಮಿಗಳ ಮುಖಂಡರುಗಳು ಬೇಡಿಕೆ ಇಟ್ಟಿರುವ ಹಿನ್ನೆಲೆಯಲ್ಲಿ ಅನುದಾನವನ್ನು ಖರ್ಚು ಮಾಡಿ ಪ್ರಗತಿ ಸಾಧಿಸುವುದು ವಿಳಂಬವಾಗುವುದರಿಂದ ಈ ಯೋಜನೆಗೆ ಕಾಯ್ದಿರಿಸಿದ ಅನುದಾನವನ್ನು ಚಿತ್ರದುರ್ಗ ನಗರದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿರುವ ಕಾಮಗಾರಿಗಳಿಗೆ ಬಳಸಿಕೊಳ್ಳಲು ದಿನಾಂಕ: 31-08-2017 ರಂದು ನಡೆದ 202ನೇ ಮಂಡಳ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ.

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿರ್ಮಾಣಕ್ಕೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಪಟ್ಟಿಯ (Deligation of Powers) ಪ್ರಕಾರ ನಿಗಮದ ಮಂಡಳಿಗೆ ರೂ.500.00 ಲಕ್ಷಗಳವರೆಗೆ ಮಾತ್ರ ಹೊಸ ಪ್ರಾಜೆಕ್ಟ್ಸ್ ಅಥವಾ ಯೋಜನೆಗಳಿಗೆ ಅನುಮೋದನೆ ನೀಡಲು ಅಧಿಕಾರವಿರುತ್ತದೆ. ಸದರಿ ಪ್ರಾಜೆಕ್ಟ್‌ನ ಅಂದಾಜು ವೆಚ್ಚ ರೂ.500.00 ಲಕ್ಷಗಳು ಮೀರುತ್ತದೆ. ಇದಕ್ಕೆ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಮೇಲೆ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಚಿತ್ರದುರ್ಗ ನಗರದಲ್ಲಿ ಕುಶಲಕರ್ಮಿಗಳಿಗೆ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡುವ ಕುರಿತು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ

**<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 326 ಎಸ್‌ಎಲ್‌ಪಿ 2017, ಬೆಂಗಳೂರು, ದಿನಾಂಕ: 11-12-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ನಗರದ ಮಧ್ಯ ಭಾಗದಲ್ಲಿ ಡಾ|| ಬಾಬು ಜಗಜೀವನ ರಾಂ ನಿಗಮವು ಹೊಂದಿರುವ 17 ಗುಂಟೆ ಜಾಗದ ಮುಂಭಾಗದಲ್ಲಿ ರೂ. 7,80,00,000/- (ರೂ.ಏಳು ಕೋಟಿ ಎಂಭತ್ತು ಲಕ್ಷಗಳು ಮಾತ್ರ) ವೆಚ್ಚದಲ್ಲಿ ನಿಗಮದ ಮಾರಾಟ ಮಳಿಗೆ ಮತ್ತು ಜಿಲ್ಲಾ ಕಛೇರಿ ಕಟ್ಟಡವನ್ನು ಒಳಗೊಂಡ ಡಾ|| ಬಾಬು ಜಗಜೀವನ ರಾಂ ಕುಶಲಕರ್ಮಿಗಳ ವಾಣಿಜ್ಯ ಸಂಕೀರ್ಣವನ್ನು ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇವರು ಟೆಂಡರ್ ಕರೆದು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಹಾಗೂ ಈ ಕಾಮಗಾರಿಯನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕೈಗೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2017, ದಿನಾಂಕ: 05-04-2017 ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/12/17

(ಪಿ.ಎನ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ),
ಸಮಾಜ ಕಲ್ಯಾಣ ಇಲಾಖೆ.

ಗೆ:-

1) ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

3) ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
4) ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು.
5) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
6) ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ
7) ಜಿಲ್ಲಾ ಸಂಯೋಜಕರು ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಚಿತ್ರದುರ್ಗ.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2) ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

* * * * *